# ಪೈಲಟ್ ಗಾಂಜಾ ಸೇವನೆ ದೃಢ

## ಏರ್ ಇಂಡಿಯಾ ವಿಮಾನ ದಿಢೀರ್ 300 ಅಡಿ ಕುಸಿದ ಪ್ರಕರಣ

**ಹೊಸದಿಲ್ಲಿ:** ಥಾಯ್ಲೆಂಡ್‌ನ ಫುಕೆಟ್‌ನಿಂದ ದಿಲ್ಲಿಗೆ ಪ್ರಯಾಣಿಸುತ್ತಿದ್ದ ಏರ್ ಇಂಡಿಯಾ ವಿಮಾನವೊಂದು ಆ.4 ರಂದು ಗಗನದಲ್ಲೇ ದಿಢೀರನೆ 300 ಅಡಿಗಳಷ್ಟು ಕುಸಿದು 17 ಪ್ರಯಾಣಿಕರು ಹಾಗೂ ಸಿಬ್ಬಂದಿ ಗಾಯಗೊಂಡಿದ್ದ ಘಟನೆಗೆ ಸಂಬಂಧಿಸಿದಂತೆ ಮಹತ್ವದ ಸಂಗತಿ ಬಯಲಾಗಿದೆ. ವಿಮಾನದ ಮುಖ್ಯ ಪೈಲಟ್ (ಪೈಲಟ್ ಇನ್ ಕಮಾಂಡ್) ಗಾಂಜಾ (ಮರಿಜುವಾನಾ) ಸೇವಿಸಿರುವುದನ್ನು ಪರೀಕ್ಷೆಗಳು ಖಚಿತಪಡಿಸಿವೆ. ಆರಂಭಿಕ ತಪಾಸಣೆಯಲ್ಲಿಯೂ ಪೈಲಟ್ ದೇಹದಲ್ಲಿ ಮಾದಕದ್ರವ್ಯದ ಅಂಶ ಪತ್ತೆಯಾಗಿತ್ತು.

ಇದೇ ವಿಚಾರವಾಗಿ ಏರ್‌ಇಂಡಿಯಾ ಸಿಇಒ ಕ್ಯಾಂಪ್‌ಬೆಲ್ ವಿಲ್ಸನ್, ಟಾಟಾ ಸನ್ಸ್ ಸಲಹೆಗಾರ ಪ್ರದೀಪ್ ಸಿಂಗ್ ಖರೋಲಾ ಹಾಗೂ ಏರ್‌ಇಂಡಿಯಾ ಸುರಕ್ಷತಾ ಮುಖ್ಯಸ್ಥ ದೀಪಕ್ ಜೋಶಿ ಅವರು ನಾಗರಿಕ ವಿಮಾನಯಾನ ಸಚಿವಾಲಯದ (ಡಿಜಿಸಿಎ) ಹಿರಿಯ ಅಧಿಕಾರಿಗಳನ್ನು ಭೇಟಿಯಾಗಿ ತನಿಖೆಯ ಸ್ಥಿತಿಗತಿಗಳ ಕುರಿತು ಚರ್ಚಿಸಿದ್ದಾರೆ. ಒಡಿಶಾದ ಆಗಸದಲ್ಲಿ ಸುಮಾರು 36,000 ಅಡಿ ಎತ್ತರದಲ್ಲಿ ಹಾರಾಟ ನಡೆಸುತ್ತಿದ್ದಾಗ ಸಂಭವಿಸಿದ ಈ ಘಟನೆಯನ್ನು 'ಗಂಭೀರ ಅಪಘಾತ' ಎಂದು ವರ್ಗೀಕರಿಸಲಾಗಿದ್ದು, ವಿಮಾನ ಅಪಘಾತ ತನಿಖಾ ಬ್ಯೂರೊ (ಎಎಐಬಿ) ಇದರ ಪೂರ್ಣ ಪ್ರಮಾಣದ ತನಿಖೆ ನಡೆಸುತ್ತಿದೆ. ತನಿಖೆಗೆ ಏರ್‌ಬಸ್ ಸಂಸ್ಥೆ ಹಾಗೂ ಫ್ರಾನ್ಸ್ ಮೂಲದ ವಿಮಾನಯಾನ ತನಿಖಾ ಸಂಸ್ಥೆ ಕೂಡ ನೆರವು ನೀಡಲಿವೆ.

ಮೊದಲಿಗೆ ಈ ದುರಂತಕ್ಕೆ ತೀವ್ರ ಹವಾಮಾನ ವೈಪರೀತ್ಯ ಅಥವಾ ಟರ್ಬುಲೆನ್ಸ್ ಕಾರಣ ಎಂದು ಹೇಳಲಾಗಿತ್ತಾದರೂ, ವಿಮಾನದ ಹೈಡ್ರಾಲಿಕ್ ಮತ್ತು ನಿಯಂತ್ರಣ ವ್ಯವಸ್ಥೆಯಲ್ಲಿ ತಾಂತ್ರಿಕ ದೋಷಗಳು ಎದುರಾಗಿದ್ದವು ಎಂದು ನಂತರದ ತನಿಖೆಯಲ್ಲಿ ಪತ್ತೆಯಾಗಿದೆ. ಕಾಕ್‌ಪಿಟ್‌ನಲ್ಲಿ ಸಾಲು ಸಾಲು ಎಚ್ಚರಿಕೆಯ ಸಂದೇಶಗಳು ಬಂದಾಗ ಪೈಲಟ್‌ಗಳು ವಿಮಾನವನ್ನು ಮ್ಯಾನುಯಲ್ ಕಂಟ್ರೋಲ್‌ಗೆ ತೆಗೆದುಕೊಂಡಾಗ ಎತ್ತರದಿಂದ ಕುಸಿತ ಉಂಟಾಗಿರಬಹುದು ಎಂದು ಶಂಕಿಸಲಾಗಿದೆ. ಒಟ್ಟು 137 ಪ್ರಯಾಣಿಕರು ಮತ್ತು 8 ಮಂದಿ ಸಿಬ್ಬಂದಿಯಿದ್ದ ಈ ವಿಮಾನವು ದಿಲ್ಲಿ ವಿಮಾನ ನಿಲ್ದಾಣದಲ್ಲಿ ಸುರಕ್ಷಿತವಾಗಿ ಇಳಿದ ನಂತರ, ಗಾಯಗೊಂಡಿದ್ದ 13 ಪ್ರಯಾಣಿಕರು ಹಾಗೂ ನಾಲ್ವರು ಸಿಬ್ಬಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು.

## ಚಿನ್ನ, ಬೆಳ್ಳಿ ದರ ಗಗನಮುಖಿ

**ಬೆಂಗಳೂರು:** ಜಾಗತಿಕ ಬಿಕ್ಕಟ್ಟಿನ ಮಧ್ಯೆಯೇ ಚಿನ್ನದ ಬೆಲೆಯಲ್ಲಿ ಭಾರಿ ಏರಿಕೆಯಾಗುತ್ತಿದೆ. ಬೆಂಗಳೂರಿನಲ್ಲಿ ಮಂಗಳವಾರ 24 ಕ್ಯಾರಟ್‌ನ 10 ಗ್ರಾಂ ಚಿನ್ನದ ಬೆಲೆಯಲ್ಲಿ 1,850 ರೂ. ಏರಿಕೆಯಾದರೆ, 22 ಕ್ಯಾರಟ್‌ನ 10 ಗ್ರಾಂ ದರದಲ್ಲಿ 1,700 ರೂ. ಜಾಸ್ತಿಯಾಗಿದೆ. ಇದರೊಂದಿಗೆ ಬೆಂಗಳೂರಿನಲ್ಲಿ 10 ಗ್ರಾಂ ಆಪರಂಜಿ ಚಿನ್ನದ ದರವು 1,53,820 ರೂ. ಆದರೆ, 22 ಕ್ಯಾರಟ್ ಬಂಗಾರದ ಬೆಲೆ 1,41,000 ರೂ. ಆಗಿದೆ. ಕಳೆದ ಒಂದು ವಾರದಲ್ಲಿ ಹಳದಿ ಲೋಹದ ಬೆಲೆಯಲ್ಲಿ 5 ಬಾರಿ ಏರಿಕೆಯಾಗಿರುವುದು ಗ್ರಾಹಕರಲ್ಲಿ ಆತಂಕ ಮೂಡಿಸಿದೆ. ರಾಜ್ಯ ರಾಜಧಾನಿಯಲ್ಲಿ ಒಂದು ಕೆ.ಜಿ ಬೆಳ್ಳಿಯ ಬೆಲೆಯಲ್ಲೂ 10 ಸಾವಿರ ರೂ. ಏರಿಕೆಯಾಗಿದೆ. ಆ ಮೂಲಕ ಈಗ 1 ಕೆ.ಜಿ ಬೆಳ್ಳಿಯ ಧಾರಣೆಯು 2.55 ಲಕ್ಷ ರೂ. ಆಗಿದೆ. ಕೆಲ ದಿನಗಳಿಂದ ಸ್ಥಿರತೆ ಕಾಯ್ದುಕೊಂಡಿದ್ದ ಬೆಳ್ಳಿ ದರ ಕೂಡ ಏರಿಕೆ ಕಾಣುತ್ತಿದೆ.

## ಇಂದಿನಿಂದ ಸ್ಮಾರ್ಟ್ ಬಜಾರ್ 'ಪೈಸಾ ವಸೂಲ್ ಸೇಲ್'

**ಮುಂಬಯಿ:** ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯ ಸೂಪರ್ ಮಾರ್ಕೆಟ್ ಬ್ರಾಂಡ್ ಆಗಿರುವ ಸ್ಮಾರ್ಟ್ ಬಜಾರ್‌ನ 'ಫುಲ್ ಪೈಸಾ ವಸೂಲ್ ಸೇಲ್' ಆಗಸ್ಟ್ 12ರಿಂದ ಆರಂಭವಾಗಿದ್ದು, ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ಗ್ರಾಹಕರಿಗೆ ಭರ್ಜರಿ ರಿಯಾಯಿತಿ ಘೋಷಿಸಿದೆ.

ಆಗಸ್ಟ್ 16ರವರೆಗೆ ಆಫರ್ ಲಭ್ಯವಿರಲಿದ್ದು, ಗ್ರಾಹಕರು ಗೃಹ ಬಳಕೆ, ವೈಯಕ್ತಿಕ ಕಾಳಜಿ, ಸಂಸ್ಕರಿತ ಆಹಾರ, ಡೇರಿ ಉತ್ಪನ್ನಗಳು ಹಾಗೂ ಫ್ಯಾಷನ್ ಉತ್ಪನ್ನಗಳನ್ನು ರಿಯಾಯಿತಿ ದರದಲ್ಲಿ ಖರೀದಿಸಬಹುದು. ಸ್ಮಾರ್ಟ್ ಬಜಾರ್‌ನಲ್ಲಿ 5 ಕೆ.ಜಿ ಬಾಸ್ಮತಿ ಅಕ್ಕಿ ಹಾಗೂ 2.73 ಕೆ.ಜಿ ಅಡುಗೆ ಎಣ್ಣೆಯನ್ನು 799 ರೂ.ಗೆ ಖರೀದಿಸಬಹುದು. ಇದೇ ರೀತಿ, ಬಿಸ್ಕೆಟ್, ಚಾಕೊಲೇಟ್‌ಗಳ 2 ಪ್ಯಾಕೆಟ್ ಖರೀದಿಸಿದರೆ 1 ಪ್ಯಾಕೆಟ್ ಉಚಿತವಾಗಿ ಸಿಗಲಿದೆ. 3.6 ಲೀಟರ್ ಆಥವಾ 5 ಕೆ.ಜಿ ಡಿಟರ್ಜೆಂಟ್‌ಗಳ ಮೇಲೆ ಕನಿಷ್ಠ ಶೇ.33ರಷ್ಟು ಡಿಸ್ಕೌಂಟ್ ಇದೆ. ಬ್ರಾಂಡೆಡ್ ಶಾಂಪೂಗಳಿಗೆ ಶೇ.60ರಷ್ಟು ರಿಯಾಯಿತಿ ನೀಡಲಾಗಿದೆ. ಪಾತ್ರೆಗಳಿಗೂ ವಿಶೇಷ ಡಿಸ್ಕೌಂಟ್ ಘೋಷಿಸಲಾಗಿದೆ.

''ದೇಶದ ಕುಟುಂಬಗಳು ವ್ಯಯಿಸುವ ಪ್ರತಿ ರೂಪಾಯಿಗೂ ಮೌಲ್ಯಯುತ ಉತ್ಪನ್ನ ನೀಡಬೇಕು ಎಂಬುದು ನಮ್ಮ ಆದ್ಯತೆ. ಗುಣಮಟ್ಟದಲ್ಲೂ ರಾಜಿಯಾಗದೆ ಅವರಿಗೆ ರಿಯಾಯಿತಿ ದರದಲ್ಲಿ ಉತ್ಪನ್ನಗಳನ್ನು ನೀಡುವುದೇ ಫುಲ್ ಪೈಸಾ ವಸೂಲ್ ಸೇಲ್ ಆಫರ್,'' ರಿಲಯನ್ಸ್ ರಿಟೇಲ್‌ನ ಗ್ರಾಸರಿ ರಿಟೇಲ್ ಸಿಇಒ ದಾಮೋದರ್ ಮಾಲ್ ಎಂದು ತಿಳಿಸಿದ್ದಾರೆ.

## ಖ್ಯಾತ ಅಣು ವಿಜ್ಞಾನಿ ಪರಮೇಶ್ವರನ್ ನಿಧನ

**ತಿರುವನಂತಪುರ:** ವಿಜ್ಞಾನದ ಕಠಿಣ ಅಂಶಗಳನ್ನು ಸರಳವಾದ ರೀತಿಯಲ್ಲಿ ವಿವರಿಸಿ ಜನಸಾಮಾನ್ಯರಿಗೆ ತಲುಪಿಸಲು ಶ್ರಮಿಸಿದ ವಿಜ್ಞಾನ ಚಳವಳಿಯ ಹರಿಕಾರ ಮತ್ತು ಪ್ರಸಿದ್ಧ ಅಣು ವಿಜ್ಞಾನಿ ಡಾ. ಎಂ. ಪಿ. ಪರಮೇಶ್ವರನ್ (91) ಅವರು ಮಂಗಳವಾರ ತ್ರಿಶ್ಶೂರ್‌ನಲ್ಲಿ ನಿಧನರಾದರು.

ಭಾಭಾ ಪರಮಾಣು ಸಂಶೋಧನಾ ಕೇಂದ್ರದ (ಬಿಎಆರ್‌ಸಿ) ಮಾಜಿ ವಿಜ್ಞಾನಿಯಾಗಿದ್ದ ಇವರು 'ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್' , 'ಭಾರತ ಜ್ಞಾನ ವಿಜ್ಞಾನ ಸಮಿತಿ' ಸೇರಿದಂತೆ ಕೇರಳದ ಐತಿಹಾಸಿಕ ಸಾಕ್ಷರತಾ ಆಂದೋಲನದಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು. ಹಲವಾರು ಕೃತಿಗಳನ್ನು ರಚಿಸಿದ ಇವರು ವಿಜ್ಞಾನದ ಕಠಿಣ ಸೂತ್ರಗಳನ್ನು ಪ್ರಯೋಗಾಲಯ ಮತ್ತು ತರಗತಿಗಳಿಂದ ಹೊರತಂದು ಸಮಾಜದಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಲು ಶ್ರಮಿಸಿದವರಲ್ಲಿ ಪ್ರಮುಖರಾಗಿದ್ದರು. 1956ರಲ್ಲಿ ತಿರುವನಂತಪುರದಲ್ಲಿ ಎಂಜಿನಿಯರಿಂಗ್ ಪದವಿ ಪಡೆದ ಪರಮೇಶ್ವರನ್, 1965 ರಲ್ಲಿ ಮಾಸ್ಕೊ ಪವರ್ ಇನ್ಸ್‌ಟಿಟ್ಯೂಟ್‌ನಿಂದ ನ್ಯೂಕ್ಲಿಯರ್ ಎಂಜಿನಿಯರಿಂಗ್‌ನಲ್ಲಿ ಪಿಎಚ್‌ಡಿ ಗಳಿಸಿದರು. ಬಿಎಆರ್‌ಸಿಯಲ್ಲಿ ವಿಜ್ಞಾನಿಯಾಗಿ ಸೇವೆ ಸಲ್ಲಿಸಿದ ಅವರು, 1975 ರಲ್ಲಿ ರಾಜೀನಾಮೆ ನೀಡಿ 'ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್' ಮೂಲಕ ಪೂರ್ಣ ಪ್ರಮಾಣದ ಸಾಮಾಜಿಕ ಕಾರ್ಯಕರ್ತರಾಗಿ ಹೊರಹೊಮ್ಮಿದರು.

## ನೀಟ್ ರದ್ದುಗೊಳಿಸಲು ಆಗ್ರಹಿಸಿ ತಮಿಳುನಾಡು ವಿಧಾನಸಭೆ ನಿರ್ಣಯ

**ಚೆನ್ನೈ:** ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯನ್ನು (ನೀಟ್) ಸಂಪೂರ್ಣವಾಗಿ ರದ್ದುಗೊಳಿಸುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸಿ ತಮಿಳುನಾಡು ವಿಧಾನಸಭೆಯಲ್ಲಿ ಮಂಗಳವಾರ ಮಹತ್ವದ ನಿರ್ಣಯವನ್ನು ಅಂಗೀಕರಿಸಲಾಗಿದೆ. ಆಡಳಿತಾರೂಢ ಟಿವಿಕೆ ಮಂಡಿಸಿದ ಈ ನಿರ್ಣಯಕ್ಕೆ ಪ್ರತಿಪಕ್ಷಗಳಾದ ಡಿಎಂಕೆ ಎಐಎಡಿಎಂಕೆ, ಎಡಪಕ್ಷಗಳು ಹಾಗೂ ಪಿಎಂಕೆ ಬೆಂಬಲ ಸೂಚಿಸಿದವು. ಆದರೆ, ಬಿಜೆಪಿಯ ಶಾಸಕರು ಮಾತ್ರ ನಿರ್ಣಯವನ್ನು ವಿರೋಧಿಸಿ ಸದನದಿಂದ ಸಭಾತ್ಯಾಗ ಮಾಡಿದರು.

ಸದನದಲ್ಲಿ ನಿರ್ಣಯ ಮಂಡಿಸಿ ಮಾತನಾಡಿದ ತಮಿಳುನಾಡು ಆರೋಗ್ಯ ಸಚಿವ ಕೆ. ಜಿ. ಅರುಣ್‌ರಾಜ್, ''ನೀಟ್ ಪರೀಕ್ಷೆಯು ಸಾಮಾಜಿಕ ನ್ಯಾಯ, ಸಮಾನತೆ ಮತ್ತು ರಾಜ್ಯಗಳ ಹಕ್ಕುಗಳಿಗೆ ಮಾರಕವಾಗಿದೆ. ಈ ಪರೀಕ್ಷಾ ಪದ್ಧತಿಯಿಂದಾಗಿ ಗ್ರಾಮೀಣ ಭಾಗದ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಬಡ ವಿದ್ಯಾರ್ಥಿಗಳಿಗೆ ವೈದ್ಯಕೀಯ ಶಿಕ್ಷಣ ಪಡೆಯುವ ಅವಕಾಶ ಕೈತಪ್ಪುತ್ತಿದೆ,'' ಎಂದು ಕಳವಳ ವ್ಯಕ್ತಪಡಿಸಿದರು. ''ವಿದ್ಯಾರ್ಥಿಗಳು ಶಾಲೆಯಲ್ಲಿ ಕಲಿಯುವ 12 ವರ್ಷಗಳ ಶಿಕ್ಷಣಕ್ಕಿಂತಲೂ ಒಂದೇ ದಿನ ನಡೆಯುವ ನೀಟ್ ಪರೀಕ್ಷೆಯೇ ಅವರ ಭವಿಷ್ಯವನ್ನು ನಿರ್ಧರಿಸುತ್ತಿರುವುದು ಸರಿಯಲ್ಲ. ಇದರಿಂದಾಗಿ ವಿದ್ಯಾರ್ಥಿಗಳು ಶಾಲಾ ಶಿಕ್ಷಣಕ್ಕಿಂತ ಕೋಚಿಂಗ್ ಸೆಂಟರ್‌ಗಳತ್ತ ಮುಖ ಮಾಡುವಂತಾಗಿದೆ. ಪರಿಣಾಮವಾಗಿ ಖಾಸಗಿ ಕೋಚಿಂಗ್ ಸೆಂಟರ್‌ಗಳು ಲಕ್ಷಾಂತರ ರೂಪಾಯಿ ಶುಲ್ಕ ವಸೂಲಿ ಮಾಡುತ್ತಾ ದಂಧೆ ನಡೆಸುತ್ತಿವೆ,'' ಎಂದು ಅವರು ಆರೋಪಿಸಿದರು.

**12ನೇ ತರಗತಿ ಅಂಕಗಳೇ ಆಧಾರವಾಗಲಿ:** ನೀಟ್ ಪರೀಕ್ಷೆಯನ್ನು ರದ್ದುಗೊಳಿಸಿ, ಹಿಂದೆ ಇದ್ದಂತೆ 12ನೇ ತರಗತಿ ಅಂಕಗಳ ಆಧಾರದ ಮೇಲೆಯೇ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶಾತಿ ಪ್ರಕ್ರಿಯೆಯನ್ನು ರಾಜ್ಯದಲ್ಲಿ ಮರುಆರಂಭಿಸಬೇಕು ಎಂದು ತಮಿಳುನಾಡು ಸರಕಾರವು ಕೇಂದ್ರವನ್ನು ಒತ್ತಾಯಿಸಿದೆ.

## ಷೇರುಪೇಟೆಗೆ ತೈಲಾಘಾತ

**ಮುಂಬಯಿ:** ಇರಾನ್‌ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಲವು ಬೇಡಿಕೆ ಇಟ್ಟಿರುವುದರಿಂದ ಬಿಕ್ಕಟ್ಟು ಸೃಷ್ಟಿ ಹಾಗೂ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಕೆಲ ದಿನಗಳಿಂದ ಏರಿಕೆಯಾಗುತ್ತಿರುವುದರ ಪರಿಣಾಮ ಮಂಗಳವಾರ ದೇಶದ ಷೇರು ಮಾರುಕಟ್ಟೆಯಲ್ಲಿ ಕಾಣಿಸಿಕೊಂಡಿದೆ. ಸೆನ್ಸೆಕ್ಸ್ 388 ಪಾಯಿಂಟ್ಸ್ ಕುಸಿತ ಕಂಡು 78,154 ಅಂಕಗಳೊಂದಿಗೆ ವಹಿವಾಟು ಅಂತ್ಯಗೊಳಿಸಿತು. ನಿಫ್ಟಿ 112 ಅಂಕ ಕುಸಿತ ಕಂಡು 24,471 ಅಂಕಗಳೊಂದಿಗೆ ದಿನದ ವಹಿವಾಟು ಕೊನೆಗೊಳಿಸಿತು. ಎಕ್ಸಿಸ್ ಬ್ಯಾಂಕ್, ಭಾರ್ತಿ ಏರ್‌ಟೆಲ್, ಬಜಾಜ್ ಫೈನಾನ್ಸ್, ಅಲ್ಟ್ರಾಟೆಕ್ ಸಿಮೆಂಟ್ ಸೇರಿ ಹಲವು ಷೇರುಗಳ ಮೌಲ್ಯ ಭಾರಿ ಕುಸಿಯಿತು. ಇನ್ಫೊಸಿಸ್, ಇನ್ಫೋಸಿಸ್, ಟೈಟನ್, ಎಚ್‌ಸಿಎಲ್ ಟೆಕ್, ಟಿಸಿಎಸ್ ಷೇರುಗಳು ಏರಿಕೆ ಕಂಡವು. ಷೇರುಪೇಟೆ ಕುಸಿತದಿಂದ ಒಂದೇ ದಿನ ಹೂಡಿಕೆದಾರರ ಸಂಪತ್ತಿನಲ್ಲಿ 2.53 ಲಕ್ಷ ಕೋಟಿ ರೂ. ಕರಗಿದೆ. ಇರಾನ್-ಅಮೆರಿಕ ನಡುವಿನ ಸಂಘರ್ಷ ಮುಂದುವರಿದಿರುವ ಕಾರಣ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆಯಲ್ಲಿ ಭಾರಿ ಏರಿಕೆಯಾಗುತ್ತಿದೆ. ಬ್ರೆಂಟ್ ಕಚ್ಚಾತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 89 ಡಾಲರ್ ಆಗಿದೆ. ಇದರಿಂದಾಗಿ ಷೇರುಪೇಟೆ ಕುಸಿದಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ. ಮತ್ತೊಂದೆಡೆ, ಮಂಗಳವಾರ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿದಿದೆ. ರೂಪಾಯಿ ಮೌಲ್ಯ 13 ಪೈಸೆ ಕುಸಿದಿದ್ದು, ಡಾಲರ್ ಮೌಲ್ಯ 95.43ಕ್ಕೆ ಏರಿಕೆಯಾಗಿದೆ.

**ಹರ್ ಘರ್ ತಿರಂಗಾ ಅಭಿಯಾನ...**

ಹೊಸದಿಲ್ಲಿಯ ಸಂಸತ್ ಕಟ್ಟಡದಲ್ಲಿ ಮಂಗಳವಾರ ಎನ್‌ಡಿಎ ಸಂಸದರು ನಡೆಸಿದ 'ಮಂಗಲ ಮಿಲನ್' ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಸೇರಿದಂತೆ ಹಲವು ಸಚಿವರು ತ್ರಿವರ್ಣ ಧ್ವಜ ಪ್ರದರ್ಶಿಸಿ 'ಹರ್ ಘರ್ ತಿರಂಗಾ' ಅಭಿಯಾನಕ್ಕೆ ಪ್ರೇರೇಪಣೆ ನೀಡಿದರು.

## ಚೀನಾ ರಾಕೆಟ್ 85 ಸೆಕೆಂಡುಗಳಲ್ಲೇ ಢಸ್!



**ಬೀಜಿಂಗ್:** ಚೀನಾದ ಬಾಹ್ಯಾಕಾಶ ಸಂಸ್ಥೆಯ ಪ್ರಮುಖ ರಾಯಭಾರಿಯಂತಿದ್ದ 'ಲಾಂಗ್ ಮಾರ್ಚ್ 7ಎ' ರಾಕೆಟ್, ಉಡಾವಣೆಯಾದ ಕೆಲವೇ ಸೆಕೆಂಡುಗಳಲ್ಲಿ ಆಕಾಶದಲ್ಲೇ ಸ್ಫೋಟಗೊಂಡಿದೆ. ಹೈನಾನ್ ದ್ವೀಪದ ವೆನ್‌ಚಾಂಗ್ ಉಪಗ್ರಹ ಉಡಾವಣಾ ಕೇಂದ್ರದಿಂದ ರಾತ್ರಿ 8 ಗಂಟೆಯ ಸುಮಾರಿಗೆ ಜಿಗಿದ ಈ ಬೃಹತ್ ರಾಕೆಟ್, ಮೇಲಕ್ಕೆ ಹಾರಿದ ಕೇವಲ 85 ಸೆಕೆಂಡುಗಳಲ್ಲಿ ದಟ್ಟವಾದ ಬೆಂಕಿಯ ಉಂಡೆಯಾಗಿ ಮಾರ್ಪಟ್ಟಿದೆ. ಜಗತ್ತಿನಾದ್ಯಂತ ರೇಡಿಯೊ ಮತ್ತು ಟಿವಿ ಪ್ರಸಾರ ಸೇವೆಗಳನ್ನು ಒದಗಿಸಲು 'ಝಾಂಗ್‌ಕ್ಸಿಂಗ್-4ಬಿ' ಎಂಬ ಸಂವಹನ ಉಪಗ್ರಹವನ್ನು ಹೊತ್ತು ಸಾಗುತ್ತಿದ್ದ ಈ ಇಡೀ ಯೋಜನೆಯು ಸ್ಫೋಟದಿಂದಾಗಿ ಸಂಪೂರ್ಣವಾಗಿ ನಾಶವಾಗಿದೆ. ಉಡಾವಣೆ ನೋಡಲು ನೆರೆದಿದ್ದ ನೂರಾರು ಪ್ರವಾಸಿಗರು ರಾಕೆಟ್ ಆಕಾಶದಲ್ಲೇ ಮುರಿದುಬೀಳುತ್ತಿದ್ದಂತೆ ಆತಂಕದಿಂದ ಕಿರುಚಾಡುತ್ತಿರುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಉಡಾವಣೆ ನಡೆದು ಮೂರು ಗಂಟೆಗಳ ನಂತರ ಚೀನಾದ ಅಧಿಕೃತ ಸುದ್ದಿಸಂಸ್ಥೆ 'ಕ್ಸಿನ್ಹುವಾ', ''ರಾಕೆಟ್ ಹಾರಾಟದ ವೇಳೆ ತಾಂತ್ರಿಕ ದೋಷ ಕಾಣಿಸಿಕೊಂಡಿದೆ,'' ಎಂದು ಕೇವಲ ಒಂದೇ ಸಾಲಿನಲ್ಲಿ ವರದಿ ಮಾಡಿದೆ. ಅಷ್ಟೇ ಅಲ್ಲದೆ, ಚೀನಾದ ಪ್ರಮುಖ ಸಾಮಾಜಿಕ ಜಾಲತಾಣಗಳಲ್ಲಿ ಸಾರ್ವಜನಿಕರು ಹಂಚಿಕೊಂಡಿದ್ದ ಸ್ಫೋಟದ ವಿಡಿಯೊಗಳನ್ನು ಸರಕಾರವು ತಕ್ಷಣವೇ ಡಿಲೀಟ್ ಮಾಡಿಸಿದೆ. ಚೀನಾದ ಈ ವೈಫಲ್ಯದ ಬಗ್ಗೆ ಜಾಲತಾಣದಲ್ಲಿ ಪ್ರತಿಕ್ರಿಯಿಸಿರುವ ಸ್ಪೇಸ್ ಎಕ್ಸ್ ಸಂಸ್ಥೆಯ ಮುಖ್ಯಸ್ಥ ಎಲಾನ್ ಮಸ್ಕ್, ''ರಾಕೆಟ್‌ಗಳನ್ನು ತಯಾರಿಸುವುದು ಮತ್ತು ಉಡಾವಣೆ ಮಾಡುವುದು ನಿಜಕ್ಕೂ ಅತಿ ಕಷ್ಟದ ಕೆಲಸ,'' ಎಂದು ಬರೆದುಕೊಂಡಿದ್ದಾರೆ.


**KRISHNAGIRI REZ TRANSMISSION LIMITED**
(100% wholly owned subsidiary of Power Grid Corporation of India Limited)
**B-9, QUTAB INSTITUTIONAL AREA, KATWARIA SARAI, NEW DELHI-110 016**

**ಪ್ರಕಟಣೆ**

**(ವಿದ್ಯುತ್ಶಕ್ತಿ ಕಾಯ್ದೆ 2003ರ ಸೆಕ್ಷನ್ 15ರ ಉಪ ಸೆಕ್ಷನ್(2)ರ ಅನ್ವಯ)**

1. ಕೃಷ್ಣಗಿರಿ ರೆಜ್ ಟ್ರಾನ್ಸ್‌ಮಿಷನ್ ಲಿಮಿಟೆಡ್, ಬಿ-9, ಕುತಬ್ ಇನ್ಸ್ಟಿಟ್ಯೂಷನಲ್ ಏರಿಯಾ, ಕತ್ವಾರಿಯಾ ಸರೈ, ನವದೆಹಲಿ-110016 ಇಲ್ಲಿ ನೋಂದಾಯಿತ ಕಚೇರಿಯನ್ನು ಹೊಂದಿದ್ದು, ಕಂಪನಿಗಳ ಕಾಯ್ದೆ 2013ರಡಿ ಸಂಯೋಜಿಸಲ್ಪಟ್ಟಿದೆ, ಇದು ನವದೆಹಲಿಯ ಕೇಂದ್ರ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ವಿದ್ಯುತ್ಶಕ್ತಿ ಕಾಯ್ದೆ 2003ರ ಸೆಕ್ಷನ್ 15ರ ಉಪ ಸೆಕ್ಷನ್ (1)ರಡಿ ಪ್ರಸರಣ ಮಾರ್ಗಗಳು, ಉಪ ಕೇಂದ್ರಗಳು ಮತ್ತು ಇತರೆ ಸ್ವತ್ತುಗಳಿಗೆ ಸಂಬಂಧಿಸಿದಂತೆ ಪ್ರಸರಣ ಪರವಾನಗಿ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿದೆ, ಅದರ ವಿವರಗಳು ಕೆಳಕಂಡಂತಿವೆ:

| ಕ್ರ. ಸಂ. | ಮಾರ್ಗ/ಉಪ ಕೇಂದ್ರದ (ಸ್ಥಳ) ಹೆಸರು | ಮಾರ್ಗದ ಉದ್ದ/ಸಾಮರ್ಥ್ಯ | ಪೂರ್ಣಗೊಳಿಸುವ ಅಂದಾಜು ವೆಚ್ಚ/ಸಮಗೊಳಿಸಿದ ಪ್ರಸರಣ ಶುಲ್ಕಗಳು | ಶೆಡ್ಯೂಲ್ ಸಿಓಡಿ |
|---|---|---|---|---|
| 1 | ಕರ್ನೂಲ್ ಜಿಲ್ಲೆಯ ಕೊಡುಮೂರು ಬಳಿ 4x1500 MVA, 765/400kV ಮತ್ತು 5x500 MVA, 400/220kV ಕೃಷ್ಣಗಿರಿ ಪೂಲಿಂಗ್ ಸ್ಟೇಷನ್ ಸ್ಥಾಪನೆ ಮತ್ತು ಕೃಷ್ಣಗಿರಿ ಪಿಎಸ್‌ನಲ್ಲಿ 2x330 MVAr (765 kV) ಬಸ್ ರಿಯಾಕ್ಟರ್‌ಗಳ ಸ್ಥಾಪನೆ, 400kV ಲೆವೆಲ್‌ನಲ್ಲಿ ತಲಾ 4500 MVAನ ಎರಡು (2) ವಿಭಾಗಗಳನ್ನು ಒದಗಿಸುವುದು.<br>**ಭವಿಷ್ಯದ ಸ್ಥಳಾವಕಾಶ ವ್ಯವಸ್ಥೆ:**<br>• 765/400kV, 1500 MVA, ICTs-2 ಸಂಖ್ಯೆಗಳು.<br>•